



ಹಂತಹಂತವಾಗಿ ಬದಲಾದ ಮನೋಭಾವ, ಕಾರ್ಯೋಪಾಯಗಳು ಹಾಗೂ ದೃಢ ಸಂಕಲ್ಪವನ್ನು ಸೂಚಿಸುತ್ತದೆ.

ಕ್ಷಯರೋಗ ಕಾರ್ಯಕ್ರಮ ಪತ್ತೆ ಮತ್ತು ಚಿಕಿತ್ಸೆಗಳಿಂದಾಚೆಗೆ, ಸೌಲಭ್ಯಕೇಂದ್ರಿತ ಸೇವಾವಲಯದಿಂದ ಸಮುದಾಯದತ್ತ ಚಲಿಸಿರುವುದು ಒಂದು ಮಹತ್ವದ ಹೊರಳು. ಸಕ್ರಿಯ ಕ್ಷಯರೋಗ ಪತ್ತೆ ಮತ್ತು ಚಿಕಿತ್ಸಾ ಆಂದೋಲನದಂತಹ ಸಮುದಾಯಮುಖಿ ಕಾರ್ಯಕ್ರಮಗಳು ಇಡೀ ಜನಸಮುದಾಯಕ್ಕೆ ಕ್ಷಯರೋಗದ ಬಗ್ಗೆ ಅರಿವು ಮತ್ತು ಜಾಗೃತಿ ನೀಡುತ್ತಿವೆ. ಸಮುದಾಯ ಮತ್ತು ಸಂಘ ಸಂಸ್ಥೆಗಳ ಸಹಭಾಗಿತ್ವವನ್ನೂ ಆಶಿಸುತ್ತಿವೆ. ಈ ಸಹಭಾಗಿತ್ವದ ಸಹನಡಿಗೆ 'ಕ್ಷಯರೋಗ ಮುಕ್ತ ಕರ್ನಾಟಕ'ವನ್ನು ಸಹಕಾರಗೊಳಿಸಲು ಮಹತ್ವದ ಪಾತ್ರವಹಿಸುತ್ತದೆ.

ಕ್ಷಯ ರೋಗದಿಂದ ಕರ್ನಾಟಕ ಹಾಗೂ ವಿಶ್ವ ಮುಕ್ತವಾಗುವ ದಿನಗಳು ಹೆಚ್ಚು ದೂರವೇನೂ ಇಲ್ಲ. ಅದಕ್ಕೆ ಬೇಕಾದುದು, ಕ್ಷಯ ರೋಗವನ್ನು ನಿರ್ಮೂಲನೆ ಮಾಡುತ್ತೇವೆ ಎನ್ನುವ ಸಾಮುದಾಯಿಕ ಸಂಕಲ್ಪದ ಇಚ್ಛಾಶಕ್ತಿ. ■

---

ಹೆಚ್ಚಿನ ಮಾಹಿತಿಗಾಗಿ ಉಚಿತ ಆರೋಗ್ಯ ಸಹಾಯವಾಣಿ 104ಕ್ಕೆ ಕರೆ ಮಾಡಿ.

---

ಹೆಚ್ಚಿನ ವಿವರಗಳಿಗಾಗಿ ಸಹ ನಿರ್ದೇಶಕರ ಕಚೇರಿ (ಕ್ಷಯ).
ಲೇಡಿ ವಿಲ್ಲಿಂಗ್ಡ್‌ನ್ ರಾಜ್ಯ ಕ್ಷಯರೋಗ ಕೇಂದ್ರ,
4ನೇ ಮುಖ್ಯ ರಸ್ತೆ, ಸಂಪಂಗಿರಾಮನಗರ,
ಬೆಂಗಳೂರು–560027
ಇಮೇಲ್ ವಿಳಾಸ: **stoka@rntcp.org**

## ಕ್ಷಯರೋಗ ನಿಯಂತ್ರಣಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳು

- ಕ್ಷಯರೋಗ ಪತ್ತೆಯಾದ ತಕ್ಷಣ ರೋಗಿಯ ಪ್ರಾಥಮಿಕ ಮಾಹಿತಿಯನ್ನು ನಿಕ್ಷಯ್ ತಂತ್ರಾಂಶದಲ್ಲಿ ನಮೂದಿಸಲಾಗುತ್ತದೆ. ಇದರಿಂದ ಚಿಕಿತ್ಸೆ ಮತ್ತು ಅನುಸರಣೆ ಮಾಡಲು ಸಹಕಾರಿಯಾಗಿದೆ.
- ಕರ್ನಾಟಕದಾದ್ಯಂತ ಇಂದು 780 ಸೂಕ್ಷ್ಮದರ್ಶಕ ಕಫ ತಪಾಸಣಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಹಾಗೂ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿಯೂ ಕಫ ತಪಾಸಣಾ ಕೇಂದ್ರಗಳನ್ನು ಪ್ರಾರಂಭಿಸಲಾಗುತ್ತಿದೆ. 64 **CBNAAT** ಯಂತ್ರಗಳಿದ್ದು, ಪ್ರತಿ ಜಿಲ್ಲೆಯವರು ಇದರ ಉಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ.
- **CBNAAT** ಯಂತ್ರದ ಮೂಲಕ ಕ್ಷಯ ರೋಗವನ್ನು ಪ್ರಾರಾಂಭದ ಹಂತದಲ್ಲಿಯೇ ಗುರುತಿಸುವುದು ಹಾಗೂ ಚಿಕಿತ್ಸೆ ನೀಡುವುದು. ಕ್ಷಯರೋಗ ಪತ್ತೆಯಲ್ಲಿ **CBNAAT** ಅತ್ಯಂತ ಸುಧಾರಿತ ಎಂದು ಹೆಸರುವಾಸಿ.
- ಡಿಆರ್‌ಟಿಬಿ ರೋಗಿಗಳ ಚಿಕಿತ್ಸೆಗಾಗಿ ಕರ್ನಾಟಕದ ಎಲ್ಲ 31 ಜಿಲ್ಲೆಗಳಲ್ಲಿ ಡಿಆರ್‌ಟಿಬಿ ಕೇಂದ್ರಗಳಿವೆ. ಅಲ್ಲದೇ ಆರು ನೋಡಲ್ ಡಿಆರ್‌ಟಿಬಿ ಕೇಂದ್ರಗಳು ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ, ಬಳ್ಳಾರಿ ಮತ್ತು ಕಲಬುರ್ಗಿಯಲ್ಲಿವೆ. ಕ್ಲಿಷ್ಟಕರ ಪ್ರಕರಣಗಳನ್ನು ನೋಡಲ್ ಕೇಂದ್ರಗಳಿಗೆ ವರ್ಗಾಯಿಸಲಾಗುತ್ತದೆ.
- ಸರ್ಕಾರ ಕ್ಷಯರೋಗ ನಿರೋಧಕ ಔಷಧಿಗಳನ್ನು ಸಂಪೂರ್ಣ ಉಚಿತವಾಗಿ ವಿತರಣೆ ಮಾಡುತ್ತಿದೆ. ಇದರಿಂದಾಗಿ, ಆರ್ಥಿಕವಾಗಿ ಹಿಂದುಳಿದವರೂ ಕೂಡ ಕ್ಷಯದ ಬಗ್ಗೆ ನಿರ್ಲಕ್ಷ್ಯ ತೋರದೆ ಚಿಕಿತ್ಸೆಯನ್ನು ಪಡೆಯಲು ಸಾಧ್ಯವಾಗಿದೆ.
- ಕ್ಷಯರೋಗಿಗಳಿಗೆ ಔಷಧ ಚಿಕಿತ್ಸೆ ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾಗಿ ಆರೈಕೆಯೂ, ಶುಶ್ರೂಷೆಯೂ ಬೇಕಾಗುತ್ತದೆ. ಹೀಗಾಗಿ, ಅವರಿಗೆ ಸಮಯಕ್ಕೆ ಸರಿಯಾಗಿ, ನಿಗದಿತ ಪ್ರಮಾಣದಷ್ಟೇ ಔಷಧ ನೀಡುವುದು ಮತ್ತು ದಿನವಿಡೀ ಅವರ ಆರೋಗ್ಯದ ಕಡೆ ಗಮನಹರಿಸುವ ವ್ಯವಸ್ಥೆಯೂ ಬೇಕಾಗುತ್ತದೆ. ಆಸ್ಪತ್ರೆಗಳಲ್ಲಿ ಅದಕ್ಕೆ ಬೇಕಾದ ವ್ಯವಸ್ಥೆ ಲಭ್ಯ.
- ಕ್ಷಯರೋಗಿಗಳಿಗೆ ಚಿಕಿತ್ಸೆಯ ಅವಧಿಯಲ್ಲಿ ಪೌಷ್ಠಿಕ ಆಹಾರ ಸೇವನೆಗಾಗಿ ಪ್ರತಿ ಮಾಹೆಯಲ್ಲಿ 500 ರೂಗಳನ್ನು ರೋಗಿಯ ಬ್ಯಾಂಕ್ ಖಾತೆಗೆ ಪಿಎಫ್‌ಎಂಎಸ್ ಮುಖಾಂತರ ನೇರವಾಗಿ ವರ್ಗಾಯಿಸಲಾಗುವುದು.
- ಖಾಸಗಿ ವೈಧ್ಯರು ಮತ್ತು ಆಸ್ಪತ್ರೆಗಳು ಕ್ಷಯ ರೋಗವನ್ನು ಪತ್ತೆ ಮಾಡಿ ಸರ್ಕಾರಕ್ಕೆ ವರದಿ ಮಾಡುವುದಕ್ಕೆ 500 ರೂ, ಹಾಗೂ ಚಿಕಿತ್ಸೆಯನ್ನು ಪೂರ್ತಿಗೊಳಿಸಿ ಸರ್ಕಾರಕ್ಕೆ ವರದಿ ಮಾಡಿದ್ದಲ್ಲಿ 500 ರೂ ಪ್ರೋತ್ಸಾಹಧನ ನೀಡಲಾಗುತ್ತಿದೆ.
- ಕ್ಷಯರೋಗಿಗಳಿಗೆ ಚಿಕಿತ್ಸೆ ಒದಗಿಸುವ ಆಶಾ/ ಅಂಗನವಾಡಿ / ಆರೋಗ್ಯ ಕಾರ್ಯಕರ್ತರಿಗೂ ಸಹ ಗೌರವಧನವನ್ನು ನೀಡಲಾಗುವುದು.
- ಔಷಧ ಅಂಗಡಿಗಳಲ್ಲಿ ಕ್ಷಯ ರೋಗಕ್ಕೆ ಸಂಬಂಧಿಸಿದ ಔಷಧಿಗಳನ್ನು ಕೌಂಟರ್ ಮಾರಾಟ ನಿಷೇಧಿಸಲಾಗಿದೆ ಮತ್ತು ಎಚ್1 ನೋಂದಣಿ ಪುಸ್ತಕವನ್ನು ಕಡ್ಡಾಯವಾಗಿ ಹೊಂದಿರಬೇಕು.